

ಸುಳು ಹಿಡಿದಿದ್ದಳು ಅಮ್ಮ. 'ಅತ್ಲಾಗಿ ಮಾರಿಬಿಡೋಣ. ಯಾಕೆ ನಿನ್ನ ಗಂಡಂಗೆ ಬೇಜಾರು ಮಾಡ್ಬೇಕು?' ಒಣಗಿದ ಗಂಟಲಲ್ಲಿ ಎಂಜಲು ನುಂಗಿಕೊಳ್ಳುತ್ತಾ ಹೇಳಿದ್ದಳು. ಮೇಲ್ನೋಟಕ್ಕೆ ಕಾಣುತ್ತಿದ್ದ ಪ್ರಮುಖ ಕಾರಣ ಇದಾಗಿದ್ದರೂ ಒಳಗಿಂದೊಳಗೆ ಪುಟಿದೇಳಲು ಕಾದಿದ್ದ ಅಸಹನೆಗೆ ನಾನಾ ಕಾರಣಗಳಿದ್ದುವು. ಹಣದ ಹಿಂದೆ ಬಿದ್ದ ಗಂಡನ ಹಪಾಪಿತನ, ಅವನ ಸರ್ವಾಧಿಕಾರದ ಮನೋಭಾವ, ಪರರ ಭಾವನೆಗೆ ಕಿಂಚಿತ್ತೂ ಗೌರವ ಕೊಡದ ಧೋರಣೆ, ಅಪ್ಪನ ಆಪ್ಪನ ಆಪರೇಷನ್ನಿಗೆಂದು ವೃಥಾ ಖರ್ಚು ಮಾಡಿದ ಹಣದ ಬಗ್ಗೆ ದಿನವೂ ಎಂಬಂತೆ ಕೊಂಕು ಮಾತು, 'ಸಾಕು ಈ ಸಾವಾಸ' ಎಂದು ಸರೋಜ ನಿಶ್ಚಯಿಸಿದ್ದು ಅವಳ ಅಮ್ಮನಿಗೆ ಕೆಂಡ ತುಳಿದಂತಾಗಿತ್ತು. 'ಬೇಡ ಕಣೇ... ಬೇಡ ಕಣೇ... ದಮ್ಮಯ್ಯ...' ಕೈಕೈ ಮುಗಿದಿದ್ದಳು ಅಮ್ಮ.

'ನಿಂಗೊತ್ತಾಗಲ್ಲ ಅಮ್ಮಾ. ಈ ವಿಷಯಕ್ಕೆ ನೀನು ತಲೆ ಹಾಕ್ಕೊಂಡು ಬರ್ಬೇಡ...' ನಿರ್ಧಾರ ಮಾಡಿಬಿಟ್ಟಿದ್ದಳು ಸರೋಜ. ತನ್ನ ಇನ್ನೊಂದು ಪ್ರಾಣವಾಗಿದ್ದ ತನ್ನಪ್ಪನ ಕುರಿತಾಗಿ ಯಾವನೋ ಮೂರನೆಯ ಮನುಷ್ಯ ಸಲ್ಲದ ಮಾತಾಡುವುದು ಅವಳಿಗೆ ಸಹನಾತೀತವಾಗಿತ್ತು. ಕೊನೆಗೂ ನಾಲ್ಕು ವರ್ಷಗಳ ಸಂಬಂಧ ಮುರಿದು ಬಿತ್ತು. ಮಗಳನ್ನು ಎತ್ತಿಕೊಂಡು ಸರೋಜ ಶಾಶ್ವತವಾಗಿ ಗಂಡನಿಗೆ ವಿದಾಯ ಹೇಳಿ ತೌರು ಸೇರಿಕೊಂಡಳು.

★★★

ಗಂಡ ಮತ್ತೊಂದು ಮದುವೆಯಾದ ಸುದ್ದಿ ಕರ್ಣಾಕರ್ಣಿಕೆಯಾಗಿ ಸರೋಜನ ಕಿವಿ ತಲುಪಿತ್ತು. ಹೊಟ್ಟೆಯೊಳಗೆ ಮತ್ಸರ ಹೊರಳಾಡಿದ್ದರೂ ಅದು ಅಲ್ಪ ಕಾಲ. ಅವನಿಂದ ಯಾವ ಜೀವನಾಂಶವನ್ನೂ ಬಯಸದೆ ಕಾನೂನುಪ್ರಕಾರವಾಗಿ ವಿಚ್ಛೇದನದ ಪ್ರಕ್ರಿಯೆ ಪೂರ್ಣಗೊಂಡಿತ್ತು ಅಂದಮೇಲೆ ಅವನಿಗೂ, ತನಗೂ ಯಾತರ ಸಂಬಂಧ? ಇಂತವನೊಬ್ಬ ತನ್ನ ಬದುಕಿನಲ್ಲಿ ಬಂದಿದ್ದ ಅನ್ನುವುದನ್ನು ಪ್ರಜ್ಞಾಪೂರ್ವಕವಾಗಿ ಮನಸ್ಸಿನಿಂದ ಕಿತ್ತೊಗೆದಳು ಸರೋಜ. ಅಪ್ಪನ ಸ್ಥಾನವನ್ನು ವಹಿಸಿಕೊಂಡು ಮನೆಯ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುತ್ತಾ, ಮಗಳನ್ನು ಸ್ಕೂಲಿಗೆ ಸೇರಿಸಿ ಓದಿಸುತ್ತಾ, ಕಾಲ ತನ್ನಷ್ಟಕ್ಕೆ ರೆಕ್ಕೆ ಕಟ್ಟಿಕೊಂಡು ಹಾರಿತು. ಅಮ್ಮ ತನ್ನ ಆಯುಷ್ಯ ಮುಗಿಸಿ ಚರಿತ್ರೆಗೆ ಸಂದಳು. ಗೋಡೆಯ ಮೇಲಿನ ಪಟವಾದಳು. ಮಗಳು ಭಾಗ್ಯ ಅಮ್ಮನ